★★★

ಮರುದಿನ ಬೆಳಿಗ್ಗೆ ಉಪಹಾರ ಸೇವಿಸುವಾಗ ನಾನು ಮನವ ಕೊರೆಯುತ್ತಿದ್ದ ಪ್ರಶ್ನೆ ಎತ್ತಿದೆ,

"ನೀನು ಹೇಳುವುದು ಯಾರೋ ಕುಳ್ಳಗಿನ ವ್ಯಕ್ತಿ ಮೇಲೇರಿ ಬರಲು ಅಲ್ಲಿ ಕಲ್ಲು ಇರಿಸಿದ್ದಾನೆಂದೆ? ಆದರೆ ಯಾಕಾಗಿ?"

"ಬಹಳ ಸರಳ, ಬಿದ್ದಪ್ಪ! ಆ ಹಾದಿಯಾಗಿ ಬಂದರೆ ಕಟ್ಟಡದ ಎದುರು ಭಾಗದಲ್ಲಿದ್ದ ಸಿಸಿಟೀವಿ ಕ್ಯಾಮೆರಾಗಳನ್ನು ತಪ್ಪಿಸಬಹುದು!"

"ಹಾಗಿದ್ದರೆ ಆ ಮೂವರಲ್ಲಿ ಕುಳ್ಳಗಿನ ವ್ಯಕ್ತಿ ಯಾರೆಂದು ಗೊತ್ತಾದರೆ..."

ನನ್ನ ಮಾತನ್ನು ಕರೆಗಂಟೆಯ ಕರ್ಕಶ ನಾದ ತುಂಡರಿಸಿತು. ಕದ ತೆರೆದೆ. ಡಿಸೋಜ ನಿಂತಿದ್ದ.

"ನಾವು ಇಬ್ಬರನ್ನು ಕರೆಸಿ, ತನಿಖೆ ನಡೆಸಿದ್ದೇವೆ. ಬೆಟ್ಟಪ್ಪ ತಾನು ನಿಗದಿತ ಸಮಯಕ್ಕೇ ಬಂದು, ಸೋಮಯ್ಯನನ್ನು ಭೇಟಿಯಾಗಿ ಹೋಗಿದ್ದೇನೆಂದು ಹೇಳಿದ. ಅವ್ನು ಸುಮಾರು ಹದಿನೈದು ನಿಮಿಷಗಳ ಕಾಲ ಅಲ್ಲಿದ್ದನಂತೆ. ಅವ್ನು ಹೇಳಿದ್ದು ಕಟ್ಟಡ ಮತ್ತು ಲಿಫ್ಟಿನಲ್ಲಿದ್ದ ಸಿಸಿಟೀವಿ ಕ್ಯಾಮೆರಾದ ದೃಶ್ಯಾವಳಿಗೆ ತಾಳೆಯಾಗುತ್ತೆ."

"ಅವ್ನು ಆ ನಂತರ ಎಲ್ಲಿದ್ದ ಅಂತ ವಿಚಾರಿಸಿದಿರಾ?"

"ತಾನು ಅಮೃತ್ತಿಗೆ ಮಿತ್ರನನ್ನು ಕಾಣಲು ಹೋಗಿದ್ದೆ, ಆದರೆ ಆತ ಸಿಗಲಿಲ್ಲ ಎಂದು ಹೇಳಿದ..."

"ಹಾಗಿದ್ದರೆ ಆತ ಎಲ್ಲಿದ್ದ ಎನ್ನುವುದಕ್ಕೆ ಸಾಕ್ಷ್ಯವಿಲ್ಲ..."

"ಬೆಟ್ಟಪ್ಪ ಕುಳ್ಳಗಿನ ಆಸಾಮಿಯೆ?" ನಾನು ಕೇಳಿದೆ.

"ಊಹೂಂ. ಅವ್ನು ಎತ್ತರದ ಆಳು..."

ನನಗೆ ನಿರಾಶೆಯಾಯಿತು.

"ಪಾಲಯ್ಯ ನಮ್ಗೆ ಸಿಗಲಿಲ್ಲ. ಬಿಟ್ಟಂಗಾಲದಲ್ಲಿ ಅವ್ನ ಮನೆ ಪತ್ತೆ ಹಚ್ಚಿದೆವು. ಅದು ಅವ್ನ ತಂದೆ ಮನೆ. ಅಲ್ಲಿ ಆತ ಇರಲಿಲ್ಲ. ಕೊಟ್ಟಮುಡಿಗೆ ಹೋಗಿದ್ದಾನೆ ಅಂತ ಹೇಳಿದ್ರು. ಕೊಟ್ಟಮುಡಿಗೆ ಹೋದ್ರೆ, ಆತ ಇನ್ನೂ ಅಲ್ಲಿಗೆ ಬಂದಿಲ್ಲ ಅಂತಂದ್ರು. ಆತನ ಫೋನು ಸ್ವಿಚ್ ಆಫ್ ಆಗಿದೆ. ಆದ್ರೆ ಅವನ್ನ ಹುಡುಕೋದು ಕಷ್ಟ ಏನಲ್ಲ, ಬಿಡಿ." ಡಿಸೋಜ ಆತ್ಮ ವಿಶ್ವಾಸ ವ್ಯಕ್ತಪಡಿಸಿದ.

"ಕೊನೆಯ ಕಕ್ಷಿಗಾರ ರುದ್ರಮುನಿ. ಉತ್ತಯ್ಯ ಹೇಳಿದ ಮಾತು ಸತ್ಯ. ಅವ್ನು ಅತ್ಯಾಚಾರ ಮಾಡಿದ್ದು ಇದೇ ಪಾಲಯ್ಯನ ಹೆಂಡತಿ ಪುಷ್ಪವಲ್ಲಿಯನ್ನ. ಈ ಪಾಲಯ್ಯ ಕಳೆದ ಕೆಲವು ವರ್ಷಗಳಿಂದ ದುಬಾಯಿಯಲ್ಲಿದ್ದಾನೆ. ಊರಿಗೆ ಬರುತ್ತಿದ್ದುದೇ ತೀರ ಅಪರೂಪ. ಈ ಸಲ ಬಂದವನು ತನ್ನ ಹೆಂಡ್ತಿನ ಬಲಾತ್ಕಾರ ಮಾಡಿದವನ ವಕೀಲನನ್ನು ಭೇಟಿಯಾಗಲು ಯಾಕೆ ಬಂದ? ಸದ್ಯಕ್ಕೆ ಉತ್ತರವಿಲ್ಲದ ಪ್ರಶ್ನೆ. ಅದಿರಲಿ. ರುದ್ರಮುನಿಗೆ ನಿನ್ನೆ ಅಪಾಯಿಂಟ್‌ಮೆಂಟ್ ಇದ್ದರೂ, ಆತ ತಾನು ಸೋಮಯ್ಯನನ್ನು ಭೇಟಿಯಾಗಲೇ ಇಲ್ಲ ಅಂತ ಹೇಳ್ತಿದ್ದಾನೆ. ಆದರೆ ಸಿಸಿಟೀವಿ ಕ್ಯಾಮೆರಾದಲ್ಲಿ ರುದ್ರಮುನಿ ಆ ಕಟ್ಟಡಕ್ಕೆ ಬಂದುದು ದಾಖಲಾಗಿದೆ... ಸುಮಾರು ಹನ್ನೊಂದೂವರೆಗೆ! ಆತ ಕೆಳ ಅಂತಸ್ತಿನಲ್ಲೇ ಎಡಭಾಗದ ಶೌಚಾಯಲದತ್ತ ನಡೆದು ಹೋಗಿದ್ದು ಕಾಣಿಸುತ್ತದೆ."

"ಹಾಗಿದ್ದರೆ ಆತ ಮಹಡಿಯ ಮೇಲೆ ಹೋಗಿಲ್ಲ?"

"ಇಲ್ಲ."

"ಆತ ವಾಪಸು ಬಂದಿದ್ದು ಎಷ್ಟು ಹೊತ್ತಿಗೆ?"

"ಅದು ಕಾಣಿಸ್ತಾ ಇಲ್ಲ. ಅಲ್ಲೊಂದು ಚಿಕ್ಕ ತೊಂದರೆಯಾಗಿದೆ. ಮಧ್ಯೆ ಒಮ್ಮೆ ವಿದ್ಯುತ್ ಕೈ ಕೊಟ್ಟಿದೆ. ಸುಮಾರು ಹನ್ನೊಂದು ಐವತ್ತರಿಂದ ಹನ್ನೆರಡವರೆಗೆ. ಬ್ಯಾಟರಿ ಇಲ್ಲದ್ದರಿಂದ ಕ್ಯಾಮೆರಾ ಕಾರ್ಯ